**O.S.No.75/2012 PW.1**

ದಿನಾಂಕಃ-02-12-2021 ರಂದು ಪುನಃ ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಮರಾಠಿ ಭಾಷೆ ಬರುತ್ತದೆ. ಆದ್ದರಿಂದ ಶ್ರೀ.ಡಿ.ಟಿ.ಬಿ ವಕೀಲರನ್ನು ಅನುವಾದಕರನ್ನಾಗಿ ನೇಮಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ-ಶ್ರೀ.ಡಿ.ಆಯ್.ಕೆ ವಕೀಲರಿಂದ ಪ್ರತಿವಾದಿ ಪರವಾಗಿ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 3 ನೇ ಪ್ರತಿವಾದಿ ಮೃತ್ಯುಪತ್ರವನ್ನು ಆಧರಿಸಿ ಹಕ್ಕನ್ನು ಸಾಧನೆ ಮಾಡುತ್ತಿದ್ದಾರೆ ಅಂತಾ ನಮೂದಿಸಿದ್ದೇನೆ ಎಂದರೆ ಸರಿಯಲ್ಲ.

ಶಾಂತಾಬೇನಯವರ 2 ನೇ ವಾರಸುದಾರರು ಜ್ಯೋತಿ ದಿವಾಕರ್ ಶಹಾ ಅಲ್ಲ. 3 ನೇ ಪ್ರತಿವಾದಿ ಮೃತ ಶಾಂತಾಬೇನರವರ 2 ನೇ ವಾರಸುದಾರರ ಅಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೀತಾಬೇನಯವರಿಗೆ ಗಂಡು ಮಕ್ಕಳು ಮತ್ತು ಹೆಣ್ಣುಮಕ್ಕಳು ಇದ್ದಾರೆ. ಸದರಿಯವರಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಪುನಃ ಸಾಕ್ಷಿ 3 ಜನ ಗಂಡು ಮಕ್ಕಳು 3 ಹೆಣ್ಣುಮಕ್ಕಳು, ಪಾಮಾಬೇನ 3 ಗಂಡು ಮತ್ತು ಒಬ್ಬ ಹೆಣ್ಣುಮಗಳು ಇದ್ದಾರೆ. ಕಸ್ತೂರಿಬೇನ ಇವರಿಗೆ ಎಷ್ಟು ಜನ ಹೆಣ್ಣುಮಕ್ಕಳು ಅಂತಾ ನನಗೆ ಗೊತ್ತಿಲ್ಲ. ಸೀತಾಬೇನ ಕೆಲವು ಮಕ್ಕಳು ಪುನೆಯಲ್ಲಿ ಇದ್ದು ಇನ್ನೂ ಕೆಲವು ಮಕ್ಕಳು ನಿಪ್ಪಾಣಿಯಲ್ಲಿ ಇದ್ದಾರೆ. ಪಾಮಾಬೇನ ಗಂಡು ಮಕ್ಕಳು ಕರಾಡದಲ್ಲಿ ಇರುತ್ತಾರೆ. ಮಗಳು ಎಲ್ಲಿ ಇರುತ್ತಾರೆ ನನಗೆ ಗೊತ್ತಿಲ್ಲ. ಕಸ್ತೂರಿಬೇನ ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಕುಸುಮಬೇನ ಇನ್ನೊಬ್ಬ ಅತ್ತೆ ಇದ್ದಾರೆ ಎಂದು ಸ್ವತಃ ನುಡಿಯುತ್ತಾಳೆ. ಸದರಿಯವರು ಜೀವಂತ ಇದ್ದಾರೆ. ಮೂಲತಃ ಮುಂಬೈದವರು ಈಗ ಅಮೆರಿಕಾದಲ್ಲಿ ಇದ್ದಾರೆ. ಸಾಕ್ಷಿ ಮುಂದುವರೆದು ಸದರಿ ಕುಸುಮಬೇನ ಇವರಿಗೆ ಇಬ್ಬರು ಗಂಡು ಮಕ್ಕಳು ಇಬ್ಬರು ಹೆಣ್ಣುಮಕ್ಕಳು ಇದ್ದಾರೆ ಎಂದು ಹೇಳುತ್ತಾರೆ.

2. ದಾವಾ ಸ್ವತ್ತು ಸಿಟಿಎಸ್ ಕ್ಷೇತ್ರದಲ್ಲಿ ಮನೆ ಹಾಗೂ ಎಷ್ಟು ಖುಲ್ಲಾ ಜಾಗೆ ಇದೆ ಅಂತಾ ನನಗೆ ಗೊತ್ತಿಲ್ಲ. ಸದರಿ ಅಂಗಡಿಗಳನ್ನು ಬಾಡಿಗೆ ಕೊಟ್ಟಿದ್ದೇವೆ. ಅಂಗಡಿ ಮಳಗಿಗಳನ್ನು ಶಾಂತಾಬೇನ ಜೀವಂತ ಇರುವಾಗ ಕೊಟ್ಟಿದ್ದಾರೆ. ಸದರಿ ಅಂಗಡಿಯ ಮಳಿಗೆಯ ಬಾಡಿಗೆಯನ್ನು ನಾನೇ ಪಡೆಯುತ್ತಿದ್ದೇನೆ. ನಿಡಿ-3 ಮೃತ್ಯುಪತ್ರದಂತೆ ರಾಜೇಂದ್ರ ಬಾಲಚಂದ್ರ ಶಹಾ, ನಿಲಯ ಬಾಲಚಂದ್ರ ಶಹಾ, ಮನೋಜ ಬಾಲಚಂದ್ರ ಶಹಾ, ನಾನು, ರಾಜೇಂದ್ರ ಚುನಿಲಾಲ ಶಹಾ ಈ ಎಲ್ಲರು ಬೆನೆಪಿಷಿಯರಿ ಎಂದರೆ ಇರಬಹುದು. ಆದರೆ ನನಗೆ ಮಾನ್ಯ ಇಲ್ಲ. ರಾಜೇಂದ್ರ, ನಿಲಯ, ಮನೋಜ ಮತ್ತು ನಾನು ವಾದಿಯ ಮಕ್ಕಳಾಗಿದ್ದು ನಾವು ಖಾಸ ಸಹೋದರು ಎಂದರೆ ಸರಿ. ನನ್ನ ಮತ್ತು ಸಹೋದರರಿಗೆ ತಲಾ 5 ಲಕ್ಷ ರೂಗಳಂತೆ ನಿಡಿ-3 ರನ್ವಯ ಕೊಡಬೇಕು ಎಂದು ಇದೆ

ಎಂದರೆ ಇರಬಹುದು, ಆದರೆ ನನಗೆ ಮೃತ್ಯುಪತ್ರ ಮಾನ್ಯ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಾದಿಯ ಹೆಂಡತಿ ಶ್ರೀಮತಿ.ಪ್ರಮಿಳಾ ಮತ್ತು ಸ್ವಾತಿ ಎಂದರೆ ಪ್ರತಿವಾದಿಯ ಹೆಂಡತಿ ಇನ್ನೂಳಿದ ಬೆನೆಪಿಷಿಯರ ನಮ್ಮ ಸಹೋದರರ ಹೆಂಡಂದಿರ ಎಂದರೆ ನಿಲಿಮಾ, ಅಲ್ಕಾ, ಶೀತಲ, ಲಲಿತಾ ಇರಬಹುದು, ಆದರೆ ನನಗೆ ನಿಡಿ-3 ಮಾನ್ಯ ಇಲ್ಲ ಎಂದು ಹೇಳುತ್ತಾರೆ. ವಾದಿ ವಾದ ಪತ್ರವನ್ನು ದಾಖಲಿಸುವ ಹಾಜರಪಡಿಸಿದ ಮೃತ್ಯುಪತ್ರ ಹಾಗೂ ನಿಡಿ-3 ರಲ್ಲಿನ ವಕ್ಕಣೆಗಳು ಮತ್ತು ಪ್ರತಿ ನಾವು ಹಾಜರಪಡಿಸಿದ ಮೃತ್ಯುಪತ್ರ ಒಂದೇ ಆಗಿತ್ತು ಎಂದರೆ ಇರಬಹುದು ಆದರೆ ನನಗೆ ಗೊತ್ತಿಲ್ಲ.

3. ನಾನು ದಿಃ05.12.2019 ರಂದು ನಿಪಿ-9 ರ ಪ್ರಕಾರ ಶ್ರೀ.ಟಿ.ಎಲ್.ಕವಟಕೊಪ್ಪ ಇವರ ಸನ್ನದ್ದನ್ನು ದಿಃ08.11.2009 ರಿಂದ ದಿಃ08.11.2011 ರವರೆಗೆ ಸಸ್ಪೆಂಡ ಮಾಡಿದ ಬಗ್ಗೆ ಆದೇಶ ಎಂದರೆ ಸರಿ. ಶಾಂತಾಬೇನ ಮತ್ತು ಇಸ್ಲಾಂಪೂರದಲ್ಲಿರುವ ಆಕೆಯ ಕುಟುಂಬಂದ ಸದಸ್ಯರ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಕೆಲವು ಮಾಹಿತಿ ಇದೆ ಎಂದು ಸಾಕ್ಷಿ ಹೇಳುತ್ತಾರೆ. ಶಹಾ ಕುಟುಂದಬವರ ಬಗ್ಗೆ ಸಂಪೂರ್ಣವಾಗಿ ಮಾಹಿತಿ ಇದೆ. ನಿಡಿ-3 ಪ್ರಕಾರ ವಾದಿ ಮತ್ತು 1 ನೇ ಪ್ರತಿವಾದಿಯನ್ನು ದಾವಾ ಸಿಟಿಎಸ ಸ್ವತ್ತಿಗೆ ದತ್ತಿಗಳಾಗಿ ನೇಮಿಸಿದ ವಿಷಯ ಗೊತ್ತಿದ್ದರು ನಾವು ಮತ್ತು ವಾದಿ ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಮಾಣಿಕಚಂದ ಶಹಾ ಎಂದರೆ ನಮ್ಮ ಮುತ್ಯಾನಿಗೆ 3 ಜನ ಗಂಡು ಮತ್ತು 4 ಹೆಣ್ಣುಮಕ್ಕಳು ಎಂದರೆ ಸರಿ. ಸಾಕ್ಷಿಯು ಮುಂದುವರೆದ 4 ಜನ ಗಂಡು ಮಕ್ಕಳು ಇದ್ದು ಅದರಲ್ಲಿ ಒಬ್ಬರು ಮದುವೆಯಾಗದೇ ತೀರಿಕೊಂದಡಿದ್ದಾರೆ. ಅವರ ಹೆಸರು ಗೊತ್ತಿಲ್ಲ. ಮಾಣಿಕಚಂದ ಶಹಾ ಎಂದರೆ ನಮ್ಮ ತಂದೆ ಬಾಲಚಂದ್ರ ಶಹಾರವರ ತಂದೆ.

<u>ಪಾಟೀ ಸವಾಲುಃ-ಶ್ರೀ.ಎ.ಆರ್.ಟಿ ವಕೀಲರಿಂದ ಪ್ರತಿವಾದಿ-3 ಪರವಾಗಿ</u>

- ನಮ್ಮ ಮುತ್ಯಾನ ಜೀವಿತಾವಧಿಯಲ್ಲಿ ಪಾಲು ವಾಟ್ನಿ ಮಾಡಿದ್ದು, ಆಗ ಎಲ್ಲರಿಗೂ ಕೊಡಬೇಕಾಗಿದ್ದನು ಕೊಟ್ಟಿದ್ದಾರೆ. ವಾಟ್ನಿಯಾದ ಬಗ್ಗೆ ಕಾಗದ ಪತ್ರಗಳು ಇದೆಯೋ ಇಲ್ಲವೋ ಅಂತಾ

ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ ರೂಪಚಂದರವರಿಗೂ ಸಹ ಹಿಸ್ಸಾ ಇದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿ ರುವರು.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ಸಾಕ್ಷಿಯ ಸಹಿ